ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080–22028032/34/ಫ್ಯಾಕ್ಸ್ 22028041

ದಿನಾಂಕ : 20–02–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | 1) Innovation Festival 2015<br>Organised by Visvesvaraya Industrial and Technological Museum and Agastya<br><br>Inauguration:<br><br>Shri Hari Prameswaran, Founder Chairman, Dynam Designs, Bengaluru | 21-2-2015<br>Friday<br>10.00 am | Auditorium,<br>Visvesvaraya Industrial and Technological Museum<br>Kasturba Road,<br>Bangalore |
| | 2) Press Meet | 21-2-2015<br>Friday<br>11.30 am | Auditorium,<br>Visvesvaraya Industrial and Technological Museum<br>Kasturba Road,<br>Bangalore |
| 2 | ಮನೆಯಂಗಳದಲ್ಲಿ ಮಾತುಕತೆ:<br>ತಿಂಗಳ ಅತಿಥಿ:<br>ಪ್ರೊ. ಅ.ರಾ. ಮಿತ್ರ,<br>ಸಾಹಿತಿಗಳು ಮತ್ತು ಉಪನ್ಯಾಸಕರು | 21–02–2015<br>ಶನಿವಾರ<br>ಸಂಜೆ<br>4–00 ಗಂಟೆಗೆ | ನಯನ ಸಭಾಂಗಣ,<br>ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು. |

| | | | |
|---|---|---|---|
| ೩ | 5th National Awards for Technology Innovtion in Petrochemicals and Downstream Industries.<br>**Chief Guest**:<br>Shri Anantha Kumar, Minister for Chemical and Fertilizers.<br>Govt. of India<br>Shri Hansraj Gangaram Ahir,<br>Minister of State for Chemical and Fertilizers, Govt. of India | 21–02–2015<br>Saturday<br>at<br>6-30 PM | Hotel The Lalit Ashok, Kumara Krupa Road, High Grounds, Bengaluru. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಕೃಷಿ ವಿಶ್ವವಿದ್ಯಾನಿಲಯದ ಘಟಿಕೋತ್ಸವ

ಬೆಂಗಳೂರು, ಫೆಬ್ರವರಿ ೨೦ (ಕರ್ನಾಟಕ ವಾರ್ತೆ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 49ನೇ ಘಟಿಕೋತ್ಸವ ಸಮಾರಂಭವು ಮಾರ್ಚ್ 14 ರ ಶನಿವಾರ ಬೆಳಿಗ್ಗೆ 11–00 ಗಂಟೆಗೆ ಕೃಷಿ ವಿಶ್ವ ವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ (ಜಿ.ಕೆ.ವಿ.ಕೆ) ಏರ್ಪಡಿಸಿದೆ.

ಘಟಿಕೋತ್ಸವ ಭಾಷಣವನ್ನು ಖ್ಯಾತ ವಿಜ್ಞಾನಿ ಭಾರತರತ್ನ ಪ್ರೊ. ಸಿ.ಎನ್.ಆರ್. ರಾವ್ ಮಾಡುವರು. ರಾಜ್ಯಪಾಲ ಶ್ರೀ ವಜುಭಾಯಿ ವಾಲಾ ಅವರು ಅಧ್ಯಕ್ಷತೆವಹಿಸಿ ಪದವಿ ಪ್ರದಾನ ಮಾಡುವರು.

ಬಾಬು:ಜಿಪಿಆರ್.

## ಸಂದರ್ಶನ

ಬೆಂಗಳೂರು, ಫೆ ೨೦ (ಕರ್ನಾಟಕ ವಾರ್ತೆ):

ಕರ್ನಾಟಕ ಲೋಕಸೇವಾ ಆಯೋಗವು ರಾಜ್ಯ ವಾರ್ತಾ ಇಲಾಖೆಯಲ್ಲಿನ ಮೂರು ಹಿರಿಯ ಸಹಾಯಕ ನಿರ್ದೇಶಕರ ಹುದ್ದೆ, ಔಷಧ ನಿಯಂತ್ರಣ ಇಲಾಖೆಯಲ್ಲಿನ ಸರ್ಕಾರಿ ಔಷಧ ವಿಜ್ಞಾನದ ಮಹಾಲಯದಲ್ಲಿ ಉಪನ್ಯಾಸಕರ ಒಂದು ಬ್ಯಾಕ್‌ಲಾಗ್ ಹುದ್ದೆ ಮತ್ತು ರೇಷ್ಮೆ ಇಲಾಖೆಯಲ್ಲಿನ ಸಹಾಯಕ ಅಭಿಯಂತರರ ಒಂದು

ಬ್ಯಾಕ್‌ಲಾಗ್ ಹುದ್ದೆ ನೇಮಕಾತಿಗಾಗಿ ಮಾರ್ಚ್ 4 ರಂದು ಬೆಳಗ್ಗೆ 9-30 ಗಂಟೆಗೆ ಆಯೋಗದ ಕೇಂದ್ರ ಕಚೇರಿಯಲ್ಲಿ ಸಂದರ್ಶನವನ್ನು ಏರ್ಪಡಿಸಿದೆ. ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನದ ಸೂಚನಾ ಪತ್ರವನ್ನು ಕಳುಹಿಸಲಾಗಿದೆ. ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಆಯೋಗದ ವೆಬ್‌ಸೈಟ್ **http//kpsc.kar.nic.in Home Page** ನಲ್ಲಿ ಪ್ರಕಟಿಸಲಾಗಿದೆ.

ಬಾಬು/ಕೆಎಂ

ಛಾಯಾಚಿತ್ರ ಶೀರ್ಷಿಕೆ:

ಕರ್ನಾಟಕ ರಾಜ್ಯಕ್ಕೆ ಎರಡನೇ ಬಾರಿಗೆ ಕೇಂದ್ರ ಸರ್ಕಾರದ ಕೃಷಿ ಕರ್ಮಣ್ ಪ್ರಶಸ್ತಿಯನ್ನು ನೀಡಿದ್ದು ಫೆಬ್ರವರಿ 19 ರಂದು ಪ್ರದಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಪ್ರದಾನ ಮಾಡಿದರು ರಾಜ್ಯ ಕೃಷಿ ಖಾತೆ ರಾಜ್ಯ ಸಚಿವ ಶ್ರೀ ಕೃಷ್ಣ ಭೈರೇಗೌಡ ಅವರು ಪ್ರಶಸ್ತಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಕೃಷಿ ಉತ್ಪಾದನೆ ಹಾಗೂ ಅಭಿವೃದ್ಧಿ ಆಯುಕ್ತರಾದ ಶ್ರೀಮತಿ ಲತಾ ಕೃಷ್ಣರಾವ್, ಕೃಷಿ ಆಯುಕ್ತ ಶ್ರೀ ಸುಬೋದ್ ಯಾದವ್ ಮತ್ತು ಕೃಷಿ ನಿರ್ದೇಶಕ ಡಾ: ಬಿ.ಕೆ. ಧರ್ಮರಾಜನ್ ಉಪಸ್ಥಿತರಿದ್ದರು.

ಬಾಬು/ಕೆಎಂ

## ಸ್ವಚ್ಚಭಾರತ್ ಮಿಷನ್ ಕಾರ್ಯಾಗಾರಕ್ಕೆ ಕೇಂದ್ರ ಸಚಿವ ವೆಂಕಯ್ಯನಾಯ್ಡು ಚಾಲನೆ

ಬೆಂಗಳೂರು, ಫೆ 20 (ಕರ್ನಾಟಕ ವಾರ್ತೆ):

2019 ರ ಅಕ್ಟೋಬರ 2 ರ ವೇಳೆಗೆ ಕರ್ನಾಟಕ ಸ್ವಚ್ಛ ರಾಜ್ಯವಾಗಿ ಘೋಷಿತವಾಗಬೇಕೆಂದು ಕೇಂದ್ರ ನಗರಾಭಿವೃದ್ಧಿ, ವಸತಿ, ಬಡತನ ನಿರ್ಮೂಲನೆ ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಎಂ. ವೆಂಕಯ್ಯನಾಯ್ಡು ಅವರು ತಿಳಿಸಿದರು.

ಅವರು ಇಂದು ನಗರದಲ್ಲಿ ಭಾರತ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯ, ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆವತಿಯಿಂದ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಚ ಭಾರತ್ ಮಿಷನ್ ಅನುಷ್ಠಾನದ ಕುರಿತು ಹಮ್ಮಿಕೊಳ್ಳಲಾಗಿದ್ದ ಒಂದು ದಿನ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಬೆಂಗಳೂರಿನಲ್ಲಿ ಮೊಟ್ಟಮೊದಲ ಕಾರ್ಯಾಗಾರವನ್ನು ನಡೆಸಲಾಗುತ್ತಿದೆ. ಕರ್ನಾಟಕದಲ್ಲಿ ಶೇ. 50 ರಷ್ಟು ಜನ ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇಲ್ಲಿ ಕುಡಿಯುವ ನೀರು , ವಸತಿ ವಿದ್ಯುತ್ ಸಮಸ್ಯೆ ಎದ್ದು ಕಾಣುತ್ತಿದೆ. ಅಲ್ಲದೆ ನೈರ್ಮಲ್ಯದ ಕೊರತೆ ಸಹ ಇದೆ. ರಾಜ್ಯದಲ್ಲಿ ಈಗಲೂ ಶೇ. 60 ರಷ್ಟು ಜನ ಬಯಲು ಶೌಚಾಲಯ ಬಳಸುತ್ತಿದ್ದಾರೆ. ಆದ್ದರಿಂದ ಪ್ರತಿ ಮನೆಯಲ್ಲೂ ಸ್ವಂತ ಶೌಚಾಲಯನ್ನು ಕಟ್ಟಿಕೊಳ್ಳಲು ಪ್ರೋತ್ಸಾಹಿಸುವುದು ಬಹು ಮುಖ್ಯ. ಸರ್ಕಾರವು ಇದಕ್ಕಾಗಿಯೇ ಹೆಣ್ಣು ಮಕ್ಕಳಿಗಾಗಿ ಶಾಲಾ ಶೌಚಾಲಯ, ಸಾರ್ವಜನಿಕ ಶೌಚಾಲಯ ಹಾಗು ಮನೆಗಳಲ್ಲಿ ಶೌಚಾಲಯ ಕಟ್ಟಿಕೊಳ್ಳಲು 2 ಲಕ್ಷ ಕೋಟಿ ರೂ. ಅನುದಾನ ನೀಡಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಮಹಿಳೆಯರಿಗೆ ಶೇ. 50 ರಷ್ಟು ಮೀಸಲಾತಿ ಕಲ್ಪಿಸಲಾಗುತ್ತಿದೆ. ಕಸ ವಿಲೇವಾರಿಗೆ ಸಹ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುತ್ತಿದ್ದು ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸುತ್ತಿದೆ. ಶಾಲಾ ಕಾಲೇಜುಗಳಲ್ಲಿ ,ಸಭೆ ಸಮಾರಂಭಗಳಲ್ಲಿ ಸಹ ಜನರಿಗೆ ನೈರ್ಮಲ್ಯದ ಕುರಿತು ತಿಳಿ ಹೇಳಲಾಗುತ್ತಿದೆ ಎಂದರು. ಅವರು ಕೇಂದ್ರ ಸರ್ಕಾರದಿಂದ ಸ್ವಚ್ಚ ಭಾರತ್ ಮಿಷನ್ ಅಡಿಯಲ್ಲಿ 80 ಕೋಟಿ ರೂ.ಗಳ ಚೆಕ್‌ಗಳನ್ನು ಪೌರಾಡಳಿತ ಇಲಾಖೆ ನಿರ್ದೇಶಕರಿಗೆ ಹಸ್ತಾಂತರಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ನಗರಾಭಿವೃದ್ಧಿ ಸಚಿವ ವಿನಯ್‌ಕುಮಾರ್ ಸೊರಕೆ ರಾಜ್ಯದಲ್ಲಿ ನಗರೋತ್ಥಾನ ಯೋಜನೆ ಹಂತಗಳಲ್ಲಿ ಸಾಗುತ್ತಿದ್ದು ಸಣ್ಣ ಹಾಗು ಮಧ್ಯಮಗಳ ಪಟ್ಟಣಗಳ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ನಗರಗಳಲ್ಲಿ ನೈರ್ಮಲ್ಯ ಕಾಪಾಡುವ ನಿಟ್ಟಿನಲ್ಲಿ ಮನೆಯಿಂದ ಮನೆಗೆ ಕಸ ಸಂಗ್ರಹಿಸಿ ವಿಲೇವಾರಿ ಮಾಡಲಾಗುತ್ತಿದೆ. ಅಲ್ಲದೆ ಒಳಚರಂಡಿ, ಕಸ ವಿಲೇವಾರಿ ವ್ಯವಸ್ಥೆ ಸುಧಾರಣೆ ಹಾಗು ನೈರ್ಮಲ್ಯ ಕಾಪಾಡುವಲ್ಲಿ ಸರ್ಕಾರ ಶ್ರಮಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿ, ಗಾಂಧೀಜಿ ಅವರ ಕನಸಿನ ಸ್ವಚ್ಛಗ್ರಾಮ ಯೋಜನೆಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ಪ್ಲಾಸ್ಟಿಕ್‌ಗಳನ್ನು ದೂರವಿಡಲು ಪ್ರಯತ್ನಿಸಬೇಕು. ಎಲ್ಲರೂ ಸಾರ್ವಜನಿಕ ಶೌಚಾಲಯ ಬಳಸುವಂತೆ ಪ್ರೋತ್ಸಾಹಿಸಬೇಕು. ಸರ್ಕಾರ ಹೆಚ್ಚು ಕಸವಿಲೇವಾರಿ ಘಟಕಗಳನ್ನು ತೆರೆಯಲಿದ್ದು ಸರಿಯಾದ ರೀತಿಯಲ್ಲಿ ಕಸ ಸಂಸ್ಕರಣೆ ಆಗಬೇಕೆಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು, ಅಲ್ಪ ಸಂಖ್ಯಾತ ಅಭಿವೃದ್ಧಿ ಮತ್ತು ವಕ್ಫ್ ಸಚಿವರಾದ ಖಮರುಲ್ ಇಸ್ಲಾಂ ಮಾತನಾಡಿ ಜನರಿಗೆ ಸ್ವಚ್ಛತೆಯ ಬಗ್ಗೆ ಮಾಹಿತಿ, ಶಿಕ್ಷಣ ಹಾಗೂ ಸಂವಹನದ ಮೂಲಕ ತಿಳುವಳಿಕೆ ನೀಡಬೇಕು. 2019 ರ ವೇಳೆಗೆ ಭಾರತವು ಸ್ವಚ್ಛ ಭಾರತವನ್ನಾಗಿ ಪರಿವರ್ತನೆಗೊಳ್ಳುವುದರಲ್ಲಿ ಸಂದೇಹವಿಲ್ಲ. ಕಸ ವಿಲೇವಾರಿಗೆ ಸರ್ಕಾರ ಪ್ರಾಮುಖ್ಯತೆ ನೀಡಿದ್ದು ಮನೆಗಳಿಗೆ ಉಚಿತ ಕಸದ ಬುಟ್ಟಿಗಳನ್ನು ನೀಡುತ್ತಿದೆ. ಸಾರ್ವಜನಿಕರ ಪಾಲ್ಗೊಳ್ಳುವಿಕೆ ಸಹ ಮುಖ್ಯವಾಗಿದ್ದು ಅವರು ತಮ್ಮ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಳ್ಳಲು ಪಣ ತೊಡಬೇಕೆಂದರು.

ಕಾರ್ಯಕ್ರಮದಲ್ಲಿ ವಂದನಾರ್ಪಣೆ ಮಾಡಿ ಮಾತನಾಡಿದ ಪೌರಾಡಳಿತ ಇಲಾಖೆ ನಿರ್ದೇಶಕಿ ಡಾ: ಎನ್. ಮಂಜುಳಾ ,ದೇಶದಲ್ಲಿ ಪ್ರಥಮವಾಗಿ ಬೆಂಗಳೂರಿನಲ್ಲಿ ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮ ನಡೆಸಲಾಗುತ್ತಿದೆ. ಪ್ರಥಮ ಹಂತದಲ್ಲಿ 4 ಲಕ್ಷ ಶೌಚಾಲಯಗಳು, 20,000 ಕಮ್ಯುನಿಟಿ ಶೌಚಾಲಯಗಳು, 15-16 ಸಾವಿರ ಸಾರ್ವಜನಿಕ ಶೌಚಾಲಯಗಳನ್ನು ಕಟ್ಟುವ ಗುರಿಯನ್ನು ಇಲಾಖೆ ಹೊಂದಿದೆ ಕಸವಿಲೇವಾರಿಯಲ್ಲಿ ಸಧ್ಯ 30-40 ರಷ್ಟು ಸಾಧನೆಯಾಗಿದ್ದು ಇದನ್ನು ಶೇ. 100 ರಷ್ಟು ಸಾಧಿಸಲಾಗುವುದೆಂದರು.

ಕಾರ್ಯಾಗಾರದಲ್ಲಿ ಕೇಂದ್ರ ನಗರಾಭಿವೃದ್ಧಿ ಇಲಾಖೆಯ ಜಂಟಿ ಕಾರ್ಯದರ್ಶಿಗಳಾದ ಪ್ರವೀಣ್ ಪ್ರಕಾಶ್, ರಾಜ್ಯ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಟಿ.ಕೆ. ಅನಿಲ್‌ಕುಮಾರ್, ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಡಿ. ಸತ್ಯಮೂರ್ತಿ ಭಾಗವಹಿಸಿದ್ದರು.

ಕವನ/ಕೆಎನ್